**ಪೊಲೀಸ್ ಅಧೀಕ್ಷಕರವರ ಕಛೇರಿ, ಬೆಂಗಳೂರು ಜಿಲ್ಲೆ, ಬೆಂಗಳೂರು**

**ಪತ್ರಿಕಾ ಪ್ರಕಟಣೆ**

**ದೊಡ್ಡಬೆಳವಂಗಲ ಪೊಲೀಸ್ ಠಾಣೆ ಮೊ. ನಂ: 80/2021 ಕಲಂ: 392 ಐಪಿಸಿ ಕೇಸಿನಲ್ಲಿ ಹಣ, ಮೋಟಾರ್ ಸೈಕಲ್, ಮೊಬೈಲ್ ಫೋನ್‌ಗಳನ್ನು ಸುಲಿಗೆ ಮಾಡಿದ್ದ ಆರೋಪಿಗಳ ಬಂಧನ.**

ದಿನಾಂಕ: 18-05-2021 ರಂದು ರಾತ್ರಿ 9:15 ಗಂಟೆಯಲ್ಲಿ ಹೋಂಡಾ ಆಕ್ಟೀವಾ ಮೋಟಾರ್ ಸೈಕಲ್ ನಲ್ಲಿ ಬಂದ ಮೂರು ಜನ ಅಪರಿಚಿತ ವ್ಯಕ್ತಿಗಳು ದೊಡ್ಡಬಳ್ಳಾಪುರ-ಡಾಬಸ್‌ಪೇಟೆ ರಸ್ತೆ, ಕೂಗೇನಹಳ್ಳಿ ಕಾಲೋನಿ-ರಾಮೇಶ್ವರ ಗೇಟ್ ಮದ್ಯೆ ಪಿರ್ಯಾದಿ ನಾರಾಯಣಸ್ವಾಮಿ ಮತ್ತು ಆತನ ಸಂಬಂದಿ ಗಂಗಾಧರ್ ರವರು ಹೋಗುತ್ತಿದ್ದ ಕೆಎ-43-ವಿ-3332 ಸ್ಪಂಡರ್ ಪ್ಲಸ್ ಮೋಟಾರ್ ಸೈಕಲ್ ಅನ್ನು ಓವರ್ ಟೇಕ್ ಮಾಡಿ ಮುಂದೆ ಹೋಗಿ ಅಡ್ಡಹಾಕಿ ಅವರ ಬಳಿ ಇದ್ದ ಕೆಎ-43-ವಿ-3332 ಸ್ಪಂಡರ್ ಪ್ಲಸ್ ಬೈಕ್, 20,000/- ನಗದು, ಒಂದು ರೆಡ್ಮಿ ಮೊಬೈಲ್, ಒಂದು ವಿವೋ ವೈ-15 ಮೊಬೈಲ್ ಗಳನ್ನು ಸುಲಿಗೆ ಮಾಡಿಕೊಂಡು ಹೋಗಿದ್ದು ಈ ಬಗ್ಗೆ ದೊಡ್ಡಬೆಳವಂಗಲ ಪೊಲೀಸ್ ಠಾಣೆಯಲ್ಲಿ ಮೊ.ನಂ: 80/2021 ಕಲಂ: 392 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿತ್ತು.

ಪ್ರಕರಣದಲ್ಲಿ ಆರೋಪಿಗಳ ಪತ್ತೆ ಬಗ್ಗೆ ಮಾನ್ಯ ಪೊಲೀಸ್ ಅಧೀಕ್ಷಕರಾದ ಶ್ರೀ ರವಿ ಡಿ ಚನ್ನಣ್ಣನವರ್, ಐಪಿಎಸ್., ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ ಲಕ್ಷ್ಮೀಗಣೇಶ್, ಕೆ.ಎಸ್.ಪಿ.ಎಸ್.,ರವರ ಮಾರ್ಗದರ್ಶನದಲ್ಲಿ, ದೊಡ್ಡಬಳ್ಳಾಪುರ ಉಪ ವಿಭಾಗದ ಡಿವೈ.ಎಸ್.ಪಿ. ಶ್ರೀ ಟಿ.ರಂಗಪ್ಪ ರವರ ನೇತೃತ್ವದಲ್ಲಿ ದೊಡ್ಡಬಳ್ಳಾಪುರ ವೃತ್ತದ ಸಿಪಿಐ ಶ್ರೀ ನವೀನ್‌ಕುಮಾರ್ ಎಂ ಬಿ, ಪಿ.ಎಸ್.ಐ. ಗಜೇಂದ್ರ ವಿ. ಹಾಗೂ ಸಿಬ್ಬಂದಿಯವರಾದ ಪಿಸಿ 1590 ಮಂಜುನಾಥ್, ಪಿಸಿ 1376 ಹುಸೇನ್, ಪಿಸಿ 1530 ನವೀನ್, ಪಿಸಿ ಕುಮಾರ್, ತಾಂತ್ರಿಕ ವಿಭಾಗದ ಹೆಚ್.ಸಿ. ಉಮೇಶ್, ಪಿ.ಸಿ ಪಾಂಡುರಂಗ ರವರುನ್ನೊಳಗೊಂಡ ವಿಶೇಷ ತಂಡವನ್ನು ರಚಿಸಿದರು.

ಸದರಿ ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದ ವಿಶೇಷ ತಂಡವು ಕೃತ್ಯ ನಡೆದ ಒಂದು ವಾರದ ಒಳಗೆ ದಿನಾಂಕ: 25-05-2021 ರಂದು **ಆರೋಪಿಗಳಾದ 1] ಸೋಮಶೇಖರ ಬಿನ್ ಚಂದ್ರಶೇಖರ್,** 21 ವರ್ಷ, ಕುರುಬ ಜನಾಂಗ, 12 ನೇ ಕ್ರಾಸ್, ಮಾಂಗಲ್ಯ ಛತ್ರದ ಪಕ್ಕ, ಶಾಂತಿನಗರ, ದೊಡ್ಡಬಳ್ಳಾಪುರ ಟೌನ್. **2] ಚಂದ್ರಕೀರ್ತಿ ಡಿ ಪಿ ಬಿನ್ ಪ್ರಕಾಶ್ ಎನ್,** 21 ವರ್ಷ, ದೇವಾಂಗ ಜನಾಂಗ, ಎಂ.ಎಸ್.ವಿ. ಸ್ಕೂಲ್ ಬಳಿ, ಸಂಜಯನಗರ, ದೊಡ್ಡಬಳ್ಳಾಪುರ ಟೌನ್. **3] ಎಸ್ ವಿನುತ್ ಬಿನ್ ಶಿವಕುಮಾರ್,** 22 ವರ್ಷ, ಲಿಂಗಾಯಿತರು, ಸರ್ಕಾರಿ ಆಸ್ಪತ್ರೆ ಬಳಿ, ಹುಲಿಯೂರು ದುರ್ಗಾ, ಕುಣಿಗಲ್ ತಾಲೋಕು, ತುಮಕೂರು ಜಿಲ್ಲೆ. ರವರನ್ನು ದಸ್ತಗಿರಿ ಮಾಡಿ ವಿಚಾರ ಮಾಡಿದಾಗ ಆರೋಪಿಗಳ ಪೈಕಿ ಎ1 ಆರೋಪಿ ಸೋಮಶೇಖರ ಎಂಒಬಿ ಆಸಾಮಿಯಾಗಿದ್ದು, ಈತನ ಮೇಲೆ ದೊಡ್ಡಬಳ್ಳಾಪುರ, ಯಲಹಂಕ ಪೊಲೀಸ್ ಠಾಣೆಗಳಲ್ಲಿ ಸುಲಿಗೆ, ದರೋಡೆ ಪ್ರಯತ್ನ ಪ್ರಕರಣಗಳು ದಾಖಲಾಗಿದ್ದು, ಆರೋಪಿ ಜನವರಿ 2ನೇ ವಾರದಲ್ಲಿ ಕ್ಯಾತ್ಸಂದ್ರ ಪೊಲೀಸ್ ಠಾಣಾ ಸರಹದ್ದಿನಲ್ಲಿ ಒಂದು ಆಕ್ಟೀವ್ ಹೋಂಡಾ ಮೋಟಾರ್ ಸೈಕಲ್ ಅನ್ನು ಕಳವು ಮಾಡಿ ನಂಬರ್ ಪ್ಲೇಟ್ ಬದಲಾಯಿಸಿಕೊಂಡು ಕೃತ್ಯಕ್ಕೆ ಉಪಯೋಗಿಸಿದ್ದು, **ಆರೋಪಿಗಳ ಕಡೆಯಿಂದ ಸುಲಿಗೆ ಮಾಡಲು ಉಪಯೋಗಿಸಿದ್ದ ಒಂದು ಆಕ್ಟೀವ್ ಹೋಂಡಾ ಮೋಟಾರ್ ಸೈಕಲ್, ಸುಲಿಗೆ ಮಾಡಿದ್ದ ಸ್ಪ್ಲೆಂಡರ್ ಪ್ಲಸ್ ಮೋಟಾರ್ ಸೈಕಲ್ ಮತ್ತು ಒಂದು ರೆಡ್‌ಮಿ ಮೊಬೈಲ್ ಫೋನ್ ಅನ್ನು ಅಮಾನತ್ತು ಪಡಿಸಿಕೊಂಡಿರುತ್ತೆ.**

ಆರೋಪಿಗಳ ಬಂಧನದಿಂದ ಈ ಕೆಳಕಂಡ ಪ್ರಕರಣಗಳು ಪತ್ತೆಯಾಗಿರುತ್ತವೆ

1] ದೊಡ್ಡಬೆಳವಂಗಲ ಪೊಲೀಸ್ ಠಾಣಾ ಮೊ ನಂ 80/2021 ಕಲಂ 392 ಐಪಿಸಿ

2] ಕ್ಯಾತ್ಸಂದ್ರ ಪೊಲೀಸ್ ಠಾಣಾ ಮೊ ನಂ 15/2021 ಕಲಂ 379 ಐಪಿಸಿ.

# ಆರೋಪಿಗಳ ಭಾವ ಚಿತ್ರಗಳು.

|  |  |  |
|---|---|---|
| ಎ1– ಸೋಮಶೇಖರ @ ಡೆಡ್ಲಿ ಸೋಮ ಬಿನ್ ಚಂದ್ರಶೇಖರ್, 21 ವರ್ಷ | ಎ2– ಚಂದ್ರಕೀರ್ತಿ ಡಿ ಪಿ ಬಿನ್ ಪ್ರಕಾಶ್ ಎನ್, 21 ವರ್ಷ, | ಎ3– ಎಸ್ ವಿನುತ್ ಬಿನ್ ಶಿವಕುಮಾರ್, 22 ವರ್ಷ, |

ಸುಲಿಗೆ ಪ್ರಕರಣದಲ್ಲಿನ ಆರೋಪಿಗಳನ್ನು ಪತ್ತೆ ಮಾಡಿ, ಮೇಲ್ಕಂಡ ಆರೋಪಿಗಳನ್ನು ಬಂಧಿಸುವ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರನ್ನು ಮಾನ್ಯ ಎಸ್‌ಪಿ ಸಾಹೇಬರು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಶ್ಲಾಘಿಸಿರುತ್ತಾರೆ.

ಅಪರ ಪೊಲೀಸ್ ಅಧೀಕ್ಷಕರು,
ಬೆಂಗಳೂರು ಜಿಲ್ಲೆ.